ಹೇಳಬೇಕಾಗಿತ್ತು? ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರೆ ಅದಕ್ಕೆ ಬದ್ಧರಾಗಿರಬೇಕಾಗಿದೆ. ಅನೇಕ ವರ್ಷಗಳಿಂದ ಕನ್ನಡವನ್ನು ಆಡಳಿತದಲ್ಲಿ ಜಾರಿಗೆ ತರುತ್ತೇವೆಂದು ಹೇಳುತ್ತಿದ್ದೀರಿ. ಆದರೆ ಸರ್ಕಾರದ ಎಲ್ಲಾ ಆದೇಶಗಳೂ ಸಹ ಇವತ್ತು ಇಂಗ್ಲೀಷ್‌ನಲ್ಲಿಯೇ ಬರುತ್ತಿದೆ. ನೀವು ಆ ರೀತಿಯಲ್ಲಿ ವಂಚನೆ, ದ್ರೋಹ ಮಾಡುವುದಕ್ಕಾಗುವುದಿಲ್ಲ. ಸರ್ಕಾರ ಇದರ ಬಗ್ಗೆ ದಯಮಾಡಿ ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಏಪ್ರಿಲ್ ಒಂದರಿಂದ ಕನ್ನಡವನ್ನು ಆಡಳಿತ ಭಾಷೆಯಾಗಿ ಸರ್ಕಾರದ ಎಲ್ಲಾ ಹಂತಗಳಲ್ಲೂ ಜಾರಿಗೆ ತರುತ್ತೇವೆಂದು ಹೇಳಿ. ವಿಧಾನ ಸೌಧದ ಪ್ರತಿ ಬಾಗಿಲಲ್ಲೂ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರ ಮತ್ತು ಮುಖ್ಯಮಂತ್ರಿಗಳ ಫೋಟೋವನ್ನು ಹಾಕಿದ್ದಾರೆ. ನಾನು ಪದೇ ಪದೇ ಇದರ ಬಗ್ಗೆ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಆದರೆ ಇವತ್ತು ಸಾರ್ವಜನಿಕ ಉದ್ಯಮಗಳ ಸಮಿತಿಯ ವರದಿ, ಕರ್ನಾಟಕ ರಾಜ್ಯ ಪತ್ರ ಮತ್ತು ರೈತರ ಬಗ್ಗೆ ಇರುವ ಡಂಕಲ್ ಪ್ರಸ್ತಾವನೆ ಎಲ್ಲಾವೂ ಹೀಗೆ ಎಲ್ಲವೂ ಸಹ ಸಂಪೂರ್ಣವಾಗಿ ಕನ್ನಡಕ್ಕೆ ವಿರುದ್ಧವಾಗಿ ಇಂಗ್ಲೀಷ್‌ನಲ್ಲಿದೆ. ನಾನು ಇದರ ಪ್ರತಿಗಳನ್ನು ಇಲ್ಲಿ ಸುಡಬೇಕೆಂದಿದ್ದೆ ; ಆದರೆ ಈ ಸದನದ ಘನತೆ ಮತ್ತು ಗೌರವಕ್ಕೋಸ್ಕರ ಆ ರೀತಿ ಸುಡಲು ಹೋಗುವುದಿಲ್ಲ. ಆದ್ದರಿಂದ, ತಮ್ಮಲ್ಲಿ ಕೇಳುತ್ತಿದ್ದೇನೆ ; ಸಾರ್ವಜನಿಕ ಉದ್ಯಮಗಳ ಸಮಿತಿಯವರು ಏಕೆ ಕನ್ನಡದಲ್ಲಿ ವರದಿಯನ್ನು ಕೊಡಲಿಲ್ಲ? ಈ ಪರಿಸ್ಥಿತಿಯಾದರೆ ಕನ್ನಡ ಉದ್ಧಾರವಾಗುವುದು ಹೇಗೆ? ಈ ಸರ್ಕಾರ ಬರೀ ಬುರುಡೆ, ಇದು ಸರ್ಕಾರದ ಯಾವ ನೀತಿ? ಇವರಿಗೆ ಕನ್ನಡದ ಬಗ್ಗೆ ಕಾಳಜಿ ಇದೆಯೆ? ಕನ್ನಡದ ಬಗ್ಗೆ ಇವರಿಗೆ ಒಂದು ನೀತಿ ಇದೆಯೆ? ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸುಮ್ಮನೆ ಮಾಡಿ ಇದಕ್ಕೆ ಒಬ್ಬರು ಸಚಿವರನ್ನು ಹಾಕಿದ್ದಾರೆ, ನಾನು ನಿನ್ನೆ ಮತ್ತು ಮೊನ್ನೆ ಸಮಯ ಸಿಕ್ಕಿದಾಗ ಪ್ರತಿಯೊಂದೂ ಇಲಾಖೆಗೆ ಹೋಗಿ ನೋಡಿದ್ದೇನೆ. ಎಲ್ಲಾ ಕಡೆ ಸಂಪೂರ್ಣವಾಗಿ ಇಂಗ್ಲೀಷ್‌ನಲ್ಲಿ ವ್ಯವಹಾರ ನಡೆಯುತ್ತಿದೆ. ಮುಖ್ಯಮಂತ್ರಿಗಳ ಕಾರ್ಯಾಲಯದಿಂದ ಹಿಡಿದು ಕೆಳಮಟ್ಟದವರೆಗೂ ಎಲ್ಲಾ ಕಡೆಯೂ ಸಂಪೂರ್ಣವಾಗಿ ಇಂಗ್ಲೀಷ್‌ನಲ್ಲಿ ನಡೆಯುತ್ತಿದೆ. ನಾವು ಮುಖ್ಯಮಂತ್ರಿಗಳ ಕಾರ್ಯಾಲಯಕ್ಕೆ ಹೋಗುತ್ತೇವೆ. ಅಲ್ಲಿ ಕನ್ನಡ ಬೆರಳಚ್ಚು ಯಂತ್ರವಿಲ್ಲ. ಇನ್ನು ಮುಂದಕ್ಕೆ ಇಂಗ್ಲೀಷ್ ಬೆರಳಚ್ಚು ಯಂತ್ರವನ್ನು ನಾವು ಹೊರಗೆ ಎತ್ತಿಹಾಕುವ ಕೆಲಸವನ್ನು ಮಾಡುತ್ತೇವೆ. ನೀವು ಸಂಸದೀಯ ವ್ಯವಹಾರಗಳ ಮಂತ್ರಿಗಳು. ವಾಟಾಳ್ ನಾಗರಾಜ್‌ರವರು ಗಲಾಟೆ ಮಾಡುತ್ತಾರೆ ಎಂದು ಹೇಳುತ್ತೀರಿ. ನಿಮ್ಮ ಸಾರ್ವಜನಿಕ ಉದ್ಯಮ ಸಮಿತಿಯ ವರದಿ ಇಂಗ್ಲೀಷ್‌ನಲ್ಲಿದೆ. ನಿಮ್ಮ ರಾಜ್ಯ ಪತ್ರದಲ್ಲಿ ಸಮಗ್ರ ಆಡಳಿತ ಎಲ್ಲಾ ಆದೇಶಗಳೂ ಇಂಗ್ಲೀಷ್‌ನಲ್ಲಿವೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ತಾವು ಒಂದು ನಿಮಿಷ ಅವಕಾಶ ಕೊಟ್ಟರೆ ಹೇಳುತ್ತೇನೆ. ತಾವು ಹೇಳುತ್ತಿರುವುದು ನ್ಯಾಯವಾಗಿದೆ. ಕನ್ನಡವಿಲ್ಲದೆ ಆಡಳಿತ ಕೊಡುವುದಕ್ಕಾಗುವುದಿಲ್ಲ. ಇವತ್ತು ಈ ಮಸೂದೆಯನ್ನು ಮಂಡಿಸುವುದಿಲ್ಲ. ಕನ್ನಡದ ಪ್ರತಿ ಬಂದಮೇಲೆ ಮಂಡಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಏಪ್ರಿಲ್ 1ರಿಂದ ಕನ್ನಡವನ್ನು ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ಕರ್ನಾಟಕದಲ್ಲಿ ಏಪ್ರಿಲ್ 1ರಿಂದ ಕನ್ನಡವನ್ನು ಜಾರಿಗೆ ತರುತ್ತೇವೆಂದು ನಾವು ಹೇಳಿರಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆಯನ್ನು ಕೊಟ್ಟು ವಿಧಾನ ಸೌಧದ ದ್ವಾರದಲ್ಲಿ ಬೋರ್ಡ್‌ಗಳನ್ನು ಹಾಕಿ ಇವತ್ತು ಇದನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗದೇ ಹೋದರೆ ನೀವು ಇದನ್ನು ಹೇಳಿದ್ದಾದರೂ ಏತಕ್ಕೆ? ಮುಖ್ಯ ಮಂತ್ರಿಗಳು ಈ ಮಾತನ್ನು ಏತಕ್ಕೆ ಹೇಳಬೇಕು? ಯಾವುದನ್ನು ಮಾಡುವುದಕ್ಕೆ ಸಾಧ್ಯವಿಲ್ಲ, ಅದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬಾರದು. ಕನ್ನಡವನ್ನು ಆಡಳಿತ ಎಲಾಲ ಹಂತಗಳಲ್ಲೂ ಜಾರಿಗೆ ತರುತ್ತೇವೆಂದು ಕಳೆದ 12 ವರ್ಷಗಳಿಂದ ಹೇಳುತ್ತಾ ಬಂದಿದ್ದೀರಿ.ಆ ನಗರದ ಒಳಗಡೆ ಕೂಡ ಇಂಗ್ಲೀಷ್‌ನ ಪ್ರತಿಗಳು ಬರುತ್ತವೆ ಎನ್ನತಕ್ಕ ಮಾತನ್ನು ನಾವು ಪದೇ ಪದೇ ಹೇಳುತ್ತಲೇ ಬರುತ್ತಿದ್ದೇವೆ. ಕನ್ನಡವನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದಕ್ಕಾಗದಿದ್ದರೆ, ನಮಗೆ ಇದು ಸಾಧ್ಯವಿಲ್ಲವೆಂದು ಹೇಳಿ. ನಿಮ್ಮ ಈ ನೀತಿ ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ಈ ರಾಜ್ಯಪತ್ರ ಎಷ್ಟು ವರ್ಷಗಳಿಂದ ಬರುತ್ತಿದೆ ಎಂಬುದನ್ನು ಮಾನ್ಯಸಂಸದೀಯ ವ್ಯವಹಾರಗಳ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಈ ರಾಜ್ಯಪತ್ರದಲ್ಲಿ ಸರ್ಕಾರದ ಸಮಗ್ರ ಆದೇಶಗಳೂ ಇಂಗ್ಲೀಷ್‌ನಲ್ಲಿದೆ. ನಿಮ್ಮ ಇಲಾಖೆಯ ಪ್ರತಿಯೊಂದು ಆದೇಶಗಳೂ ಇಂಗ್ಲೀಷ್‌ನಲ್ಲಿವೆ. ನಿಮ್ಮ ಸರ್ಕಾರಕ್ಕೆ ಕನ್ನಡದ ಬಗ್ಗೆ ಅಭಿಮಾನ ಇದೆಯೇ? ನಿಮ್ಮ ಸರ್ಕಾರ ಕೇವಲ ಘೋಷಣೆ ಸರ್ಕಾರ, ನಿಮ್ಮದು ಬರೀ ಬುರುಡೆ ಸರ್ಕಾರ. ಸ್ವಾಮಿ, 6ನೇ ತಾರೀಖು ಸಾರ್ವಜನಿಕ ಉದ್ದಿಮೆಗಳ ಸಮಿತಿಯವರು ಕೊಟ್ಟಿರತಕ್ಕ ವರದಿ ಇಂಗ್ಲೀಷ್‌ನಲ್ಲಿದೆ. ಕನ್ನಡದಲ್ಲಿ ಇವರು ಏತಕ್ಕೆ ವರದಿಯನ್ನು ಕೊಡಬಾರದು? ನಾವು ಇದರ ಬಗ್ಗೆ ಎಷ್ಟುಸಾರಿ ಹೇಳಬೇಕು? ಇನ್ನು ನಮಗುಳಿದಿರತಕ್ಕದ್ದು ಕೇವಲ ತೀವ್ರ ಹೋರಾಟ ಒಂದೇ ಒಂದು. ಮೊನ್ನೆ ಇಂಗ್ಲೀಷ್ ನಾಮ ಫಲಕಕ್ಕೆ ಟಾರನ್ನು ಬಳಿಯುವುದಕ್ಕೆ ಹೋದಾಗ ನಮ್ಮ ಮೇಲೆ ಮೊಕದ್ದಮೆಯನ್ನು ಹಾಕಿ ನಮ್ಮನ್ನು ನ್ಯಾಯಾಲಯಕ್ಕೆ ಕರೆದಿದ್ದಾರೆ. ಕನ್ನಡದ ಬಗ್ಗೆ ನಿಮ್ಮ ಮತ್ತು ನಿಮ್ಮ ಸರ್ಕಾರದ ನೀತಿ ಏನು ಎಂಬುದನ್ನು ತಾವು ಸ್ಪಷ್ಟಪಡಿಸಬೇಕು. ಕೇವಲ ಘೋಷಣೆ ಮಾಡತಕ್ಕದ್ದಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ಇವತ್ತು ಕನ್ನಡದ ಬಗ್ಗೆ ಇಲ್ಲಿ ಒಂದು ಹೇಳಿಕೆಯನ್ನು ಕೊಡುತ್ತಾರೆ. ಏಪ್ರಿಲ್ 1ನೇ ತಾರೀಖಿನಿಂದ ಜಾರಿ ಮಾಡುತ್ತೇವೆಂದು ಹೇಳಿದ್ದು ಸರಿ. ಆದರೆ, ಅನೇಕ ಪರಿಪತ್ರಗಳು .....

ಶ್ರೀ ಕೆ. ಎಸ್. ಈಶ್ವರಪ್ಪ : ಆ ಹೇಳಿಕೆಯನ್ನು ಕನ್ನಡದಲ್ಲಿ ಕೊಡುತ್ತಾರೋ, ಅಥವಾ ಇಂಗ್ಲೀಷ್‌ನಲ್ಲಿ ಕೊಡುತ್ತಾರೋ? ಇಂಗ್ಲೀಷ್‌ನಲ್ಲಿ ಕೊಡುವುದು ಗುಲಾಮಗಿರಿಯ ಸಂಕೇತ. ನಮಗೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ನೀವು ಮಾತ್ರ ಇನ್ನೂ ಇಂಗ್ಲೀಷ್‌ರ ಗುಲಾಮರಾಗಿ ಬದುಕುತ್ತಿದ್ದೀರಿ. ನಾಚಿಕೆಯಾಗಬೇಕು. 4 ಗೋಡೆಗಳ ಮಧ್ಯೆ, ನಿಮ್ಮ ಫೋಟೋಗಳನ್ನು ಹಾಕಿಕೊಂಡು ಕೇವಲ ಕನ್ನಡದ

ಪ್ರಚಾರ ಗಿಟ್ಟಿಸಿಕೊಳ್ಳುತ್ತಿದ್ದೀರಿ. ಕನ್ನಡದ ಅಭಿವೃದ್ಧಿ ಮಾಡುವುದಕ್ಕೆ ನಾಚಿಕೆ ಪಟ್ಟು ಕೊಳ್ಳುತ್ತಿದ್ದೀರಿ. ಇದು ನೀವು ಕನ್ನಡಕ್ಕೆ ಬಗೆಯುತ್ತಿರುವ ದ್ರೋಹ.

ಶ್ರೀ ವಾಟಾಳ್ ನಾಗರಾಜ್ : ಇದು ಕನ್ನಡಕ್ಕೆ ಮಾಡಿರುವ, ರಾಜ್ಯದ ಕನ್ನಡಿಗರಿಗೆ ಮಾಡಿರುವ ದೊಡ್ಡ ದ್ರೋಹ. ವಿಧಾನ ಸೌಧದ ಮಹಾದ್ವಾರದಲ್ಲಿ ಹಾಕಿರುವ ಮುಖ್ಯಮಂತ್ರಿಗಳ ಭಾವಚಿತ್ರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳ ಭಾವಚಿತ್ರ ಇವೆರಡನ್ನೂ ನಾವು ಕಿತ್ತುಹಾಕಬೇಕು. ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡಿದ್ದೇವೆಂದು ಎದೆ ತಟ್ಟಿ, ಹೃದಯ ಬಿಚ್ಚಿ ಹೇಳಿ, ನಿಮ್ಮ ಕನ್ನಡ ಎಲ್ಲಿದೆ? ಕನ್ನಡದ ಬಗ್ಗೆ ಈ ಸದನದಲ್ಲಿ ಸತ್ಯಕ್ಕೆ ದೂರವಾಗಿ, ಸುಳ್ಳಿನ ವಾಗ್ದಾನವನ್ನು ಕೊಡುತ್ತಿದ್ದೀರಿ, ಭರವಸೆಯನ್ನು ಕೊಡುತ್ತಿದ್ದೀರಿ, ಕನ್ನಡಿಗರನ್ನು ತಪ್ಪು ದಾರಿಗೆಳೆಯುತ್ತಿದ್ದೀರಿ. ನಿಮ್ಮದು ಕೇವಲ ಘೋಷಣೆಯಾಗಿದೆ. ಕನ್ನಡದ ಬಗ್ಗೆ ನಿಮ್ಮ ಒಂದೇ ಒಂದು ಯೋಜನೆ ಕೂಡ ಇಲ್ಲ. ಒಂದು ನೀತಿ, ಒಂದು ನಿಯಮ ಇಲ್ಲ. ಕೇವಲ ಐ.ಎ.ಎಸ್; ಐ.ಪಿ.ಎಸ್. ಅಧಿಕಾರಿಗಳು ಯಾರಿದ್ದಾರೆ ಅವರು ಇಂಗ್ಲೀಷ್ ವಾದಿಗಳಾಗಿದ್ದಾರೆ. ಅವರು ಮಂತ್ರಿಗಳನ್ನು ದಾರಿ ತಪ್ಪಿಸುತ್ತಿದ್ದಾರೆ. ಕನ್ನಡದ ಬಗ್ಗೆ ಈ ಸರ್ಕಾರಕ್ಕೆ ಸ್ವಲ್ಪವೂ ಕಾಳಜಿ ಇಲ್ಲವೆಂಬುದನ್ನು ನಾನು ಸ್ಪಷ್ಟಪಡಿಸುತ್ತಿದ್ದೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಮಾನ್ಯ ಸಭಾಧ್ಯಕ್ಷರೇ, ಡಂಕಲ್ ಪ್ರಸ್ತಾವನೆ ಒಕ್ಕಲುತನಕ್ಕೆ ಸಂಬಂಧಪಟ್ಟಿದ್ದು. ಗ್ರಾಮಿಣ ಪ್ರದೇಶದಿಂದ ಬಂದಿರುವಂಥ ಅನೇಕ ಶಾಸಕರಿಗೆ ಇಂಗ್ಲೀಷ್ ಬರುವುದಿಲ್ಲ. ಈ ಪ್ರಸ್ತಾವನೆಯ ಬಗ್ಗೆ ನಿಮ್ಮ ಸಲಹೆ ಸೂಚನೆಗಳನ್ನು ಹೇಗೆ ಕೊಡುವುದು? ನಾವು ಹೇಗೆ ಸಲಹೆ ಸೂಚನೆಗಳನ್ನು ಕೊಡಬೇಕೆಂದು ತಾವೇ ಹೇಳಿ.

ಶ್ರೀ ಆರ್. ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಡಂಕಲ್ ಪ್ರಸ್ತಾವನೆಯನ್ನು ಮಾನ್ಯ ಸಚೇತಕರು ನಮಗೆ ಏನು ಕಳುಹಿಸಿಕೊಟ್ಟಿದ್ದಾರೆ ಅದರ ಕವರಿಂಗ್ ಲೆಟರ್ ಬೇರೆ ಕನ್ನಡದಲ್ಲಿದೆ. ಉಳಿದುದೆಲ್ಲಾ ಇಂಗ್ಲೀಷ್‌ನಲ್ಲಿದೆ. ಇವತ್ತು ಸರ್ಕಾರ ತನ್ನ ನೀತಿಯಲ್ಲಿ ಬಹಳ ಸ್ಪಷ್ಟವಾಗಿ ಹೇಳಿದೆ. ಏಪ್ರಿಲ್ 1ನೇ ತಾರೀಖಿನಿಂದ ಸರ್ಕಾರದ ಆಡಳಿತದಲ್ಲಿ ಎಲ್ಲಾ ಹಂತಗಳಲ್ಲೂ ಕನ್ನಡವನ್ನೇ ಜಾರಿಗೆ ತರುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಇಡೀ ರಾಜ್ಯತುಂಬಾ ಲೆಜಿಸ್ಲೇಟರ್ಸ್ ಹೋಂನಲ್ಲಿ, ಅವರು ಎಲ್ಲೆಲ್ಲಿ ಹೋಗುತ್ತಾರೆ ಅಲ್ಲೆಲ್ಲಾ ಹೇಳಿದ್ದಾರೆ. ಒಂದು ಕಡೆ ಮಾನ್ಯಮುಖ್ಯಮಂತ್ರಿಗಳ ಫೋಟೋ, ಇನ್ನೊಂದು ಕಡೆ ಸಚಿವ ವಿಶ್ವನಾಥ್‌ರವರ ಫೋಟೋ, ಅದರ ಜೊತೆಗೆ ಸ್ಲೋಗನ್‌ಗಳು. ನಾನಾದರೂ ಹೇಳುತ್ತೇನೆ; ನೀವು ಇದನ್ನು ಏತಕ್ಕೆ ಕಾರ್ಯರೂಪಕ್ಕೆ ತರುವುದಕ್ಕಾಗುವುದಿಲ್ಲ? ನಿಮಗಿರತಕ್ಕ ಕಷ್ಟಗಳೇನು? ನಾವು ಮಾಡುತ್ತೇವೆಂದು ಹೇಳಿದ ಮೇಲೆ ಅದನ್ನು ಮಾಡಬೇಕಾಗುತ್ತದೆ. ಎಲ್ಲ ಹಂತದಲ್ಲೂ ಮಾಡಬೇಕಾಗುತ್ತದೆ. ನಾವು ಎಲ್ಲಾ ಹಂತದಲ್ಲಿ ಮಾಡುತ್ತೇವೆಂದು ಹೇಳಿ ಎಲ್ಲರಿಗೂ ಇಂಗ್ಲೀಷ್‌ನಲ್ಲೇ ಕಳುಹಿಸುತ್ತಿದ್ದೀರಿ. ಪಬ್ಲಿಕ್ ಅಂಡರ್‌ಟೇಕಿಂಗ್ಸ್ ರಿಪೋರ್ಟ್ ಇಂಗ್ಲೀಷ್‌ನಲ್ಲಿದೆ. ಡಂಕಲ್ ಪ್ರಸ್ತಾವನೆಯೂ ಇಂಗ್ಲೀಷ್‌ನಲ್ಲಿದೆ; ಆದರೂ ತಾವು ಹೇಳುತ್ತಿದ್ದೀರಿ, ನಾವು ಕನ್ನಡವನ್ನು ಆಡಳಿತದಲ್ಲಿ ಜಾರಿಗೆ ತರುತ್ತೇವೆ ಎಂದು. ಒಟ್ಟಿನಲ್ಲಿ ಹೇಳುವುದಾದರೆ ಕನ್ನಡವನ್ನು ಎಲ್ಲ ಹಂತದಲ್ಲೂ

ಜಾರಿಗೆ ತರುವುದಕ್ಕೆ ನಿಮಗೆ ಇಚ್ಛೆ ಇಲ್ಲ. ನೀವು ನಿಮಗೇ ಮೋಸ ಮಾಡಿಕೊಳ್ಳುತ್ತಿದ್ದೀರಿ. ನಮಗೆ ಅಷ್ಟೇ ಅಲ್ಲ, ರಾಜ್ಯದ ಜನತೆಗೂ ಕೂಡ ಮೋಸ ಮಾಡುತ್ತಿದ್ದೀರಿ. ಇವತ್ತು ಹೇಳಿಕೆಯನ್ನು ಕೊಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅವರು ಕೇವಲ ಹೇಳಿಕೆಯನ್ನು ಕೊಟ್ಟು ಮಾಡುವುದಾದರೂ ಏನಿದೆ? ಇದಕ್ಕೆ ಬದಲು ಕನ್ನಡವನ್ನು ಆಡಳಿತಭಾಷೆಯಾಗಿ ಎಲ್ಲ ಹಂತದಲ್ಲೂ ಜಾರಿಗೆ ತರುವುದರಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳಬೇಕು. ಏಪ್ರಿಲ್ 1ನೇ ತಾರೀಖಿನಿಂದ ಜಾರಿಗೆ ತರುತ್ತೇವೆಂದು ಏನು ಹೇಳಿದ್ದೀರಿ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಎಲ್ಲಾ ಮಂತ್ರಿಗಳೂ ಇಲಾಖೆಯ ಎಲ್ಲಾ ಟಿಪ್ಪಣಿಗಳನ್ನೂ ಕನ್ನಡದಲ್ಲೇ ಬರೆಯುತ್ತೇವೆ, ನಮ್ಮ ಸಹಿ ಎಲ್ಲಾ ಕನ್ನಡದಲ್ಲೇ ಇರುತ್ತದೆ ಎಂದು ಹೇಳಿದಿರಿ. ಆದರೆ ನಿಮ್ಮ ಮಂತ್ರಿಗಳ ಸಹಿಯೆಲ್ಲಾ ಇಂಗ್ಲೀಷ್‌ನಲ್ಲೇ ಇದೆ. ಇದು ಬರೀ ಬುರುಡೆ. ನಾನು ಇವತ್ತು ಅನೇಕ ಮಾನ್ಯಮಂತ್ರಿಗಳನ್ನು ಮೆಚ್ಚುತ್ತೇನೆ. ಕಾರಣ, ತಪ್ಪಾದರೂ ಕೂಡ ಚಿಂತೆ ಇಲ್ಲವೆಂದು ಕನ್ನಡದಲ್ಲೇ ಕಷ್ಟಪಟ್ಟು ಮಾತನಾಡುತ್ತಾರೆ. ಈ ಸರ್ಕಾರ ಆಡಳಿತದಲ್ಲಿ ಕನ್ನಡವನ್ನು ತರುವುದಕ್ಕೆ ಬಂದಿರತಕ್ಕ ರೋಗವಾದರೂ ಏನು ಎಂಬುದು ನಮಗೆ ಸ್ಪಷ್ಟವಾಗಬೇಕು. ಈ ಸರ್ಕಾರಕ್ಕಿರುವ ತೊಂದರೆಯಾದರೂ ಏನೆಂಬುದನ್ನು ಹೇಳಬೇಕು. ನಾನು ತಮಗೆ ಹೇಳುತ್ತೇನೆ, ಕೇವಲ 250 ಕನ್ನಡ ಬೆರಳಚ್ಚು ಯಂತ್ರಗಳ ಖರೀದಿಗೆ ಸರ್ಕಾರ ಆದೇಶ ಮಾಡಿದೆ. ಇವತ್ತು ಸರ್ಕಾರದ ಎಲ್ಲಾ ಇಲಾಖೆಗಳಿಂದ ಕನಿಷ್ಠ 3000 ಕನ್ನಡ ಬೆರಳಚ್ಚುಗಳ ಕೊರತೆ ಇದೆ. ಬೆರಳಚ್ಚುಗಾರರನ್ನು ಇವರು ತುಂಬಿಲ್ಲ, ಕನ್ನಡ ಬೆರಳಚ್ಚುಗಾರರನ್ನು ಹೊರಗೆ ಹಾಕಿದ್ದಾರೆ, ಸರ್ಕಾರಿ ಅಧಿಕಾರಿಗಳನ್ನು ನೇಮಕ ಮಾಡುವಾಗ, ನೇಮಕವಾದ ಮೇಲೆ ಎರಡು ತಿಂಗಳಲ್ಲಿ ಕನ್ನಡ ಕಲಿಯಬೇಕೆಂದು ಹೇಳುತ್ತಾರೆ. ನೇಮಕ ಆಗುವುದಕ್ಕಿಂತ ಮುಂಚಿತವಾಗಿಯೇ ಇಲ್ಲಿಗೆ ಬರತಕ್ಕಂಥ ಅಧಿಕಾರಿಗಳು ಕನ್ನಡ ಕಲಿತಿರಬೇಕು, ಅವರು ಕನ್ನಡ ಓದುವುದನ್ನು, ಕನ್ನಡ ಬರೆಯುವುದನ್ನು ಕಲಿತಿರಬೇಕು. ಇದು ಕೇವಲ ಅವರು ಅಧಿಕಾರಕ್ಕೆ ಬಂದನಂತರ ಎರಡು ತಿಂಗಳಲ್ಲಿ ನೀವು ಕನ್ನಡ ಕಲಿಯಬೇಕೆಂದು ಹೇಳತಕ್ಕಂಥ ಘೋಷಣೆ ಇವೆಯಲ್ಲಾ, ಇದು ಕನ್ನಡಕ್ಕೆ ಮಾರಕ. ಇದು ಕನ್ನಡ ನಾಡಿಗೆ ಮಾಡತಕ್ಕಂಥ ಮಹಾಕ್ರೂರ. 1956ರಿಂದ ಇಲ್ಲಿಯವರೆಗೂ ಕನ್ನಡದ ಬಗ್ಗೆ ಸಮಗ್ರ ಚಿಂತನೆ ಇಲ್ಲ. ಒಂದು ಸರಿಯಾದ ಯೋಜನೆ ಇಲ್ಲ. ಬರೇ ಘೋಷಣೆ ; ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಬರೇ ಪ್ರಶಸ್ತಿಗಳ ಒಂದು ವಿತರಣೆ. ಇದನ್ನು ಬಿಟ್ಟರೆ ಸರ್ಕಾರಕ್ಕೆ ಏನಿದೆ ಹೇಳಿ. ಇದು ಸರ್ಕಾರದ ನೀತಿಯೇ? ಈ ಸದನದ ಸಮಿತಿ ಆದ ಸಾರ್ವಜನಿಕ ಉದ್ದಿಮೆ ಸಮಿತಿಗೆ ಏನಾಗಿದೆ ಸ್ವಾಮಿ. ಏತಕ್ಕೆ ಇವರು ಕನ್ನಡದಲ್ಲಿ ವರದಿ ಕೊಡಬಾರದು? ಇವರಿಗೆ ತರ್ಜಮೆದಾರರು ಇಲ್ಲವೇ? ಈ ಸಮಿತಿಯ ಅಧ್ಯಕ್ಷರು ಕನ್ನಡದವರಲ್ಲವೇ? ಕೇಳಿ ಆ ಅಧ್ಯಕ್ಷರನ್ನು ಏನಾಗಿದೆ ಎಂದು. ಅವರು ಇಲ್ಲೇ ಕುಳಿತಿದ್ದಾರೆ, ಅವರಿಗೆ ಏನು ತೊಂದರೆಯಾಗಿದೆ ಎಂದು. ನಾನು ಕೇಳುತ್ತಿದ್ದರೂ ಏತಕ್ಕೆ ಬಾಯಿಮುಚ್ಚಿಕೊಂಡು ಕುಳಿತಿದ್ದಾರೆಂದು ಕೇಳುತ್ತಿದ್ದೇನೆ. ಏನು ಪರಿಸ್ಥಿತಿಯಾಗಿದೆ ಇವತ್ತಿನ ದಿವಸ. ಇದು ಅಷ್ಟು ಲಘುವಲ್ಲ. ನಾನು ಇದನ್ನು ಈ ಸದನದಲ್ಲಿ ಏತಕ್ಕೆ ಸುಡುತ್ತಿಲ್ಲವೆಂದರೆ, ನಾನು ಈ ಸದನಕ್ಕೆ ಬಹಳ ಮಹತ್ವದ ಗೌರವವನ್ನು ಕೊಡುತ್ತಿದ್ದೇನೆ. ಆದ್ದರಿಂದ ಈಗ ಸರ್ಕಾರ ಅವರು ಏನೇ

ಉತ್ತರ ಕೊಡಲಿ, ನಾವು ಮುಖ್ಯಮಂತ್ರಿಗಳ ಕಾರ್ಯಾಲಯದ ಮುಂದೆ ಈ ಪ್ರತಿಯನ್ನು ಸುಡಲು ಹೋಗುತ್ತಿದ್ದೇನೆ. ಇಲ್ಲಿ ಯಾರ್ಯಾರು ತಾವು ಕನ್ನಡದ ಅಭಿಮಾನ ಇರತಕ್ಕಂಥವರು ನಮ್ಮ ಜೊತೆಯಲ್ಲಿ ಬರುವುದಾದರೆ, ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಮಾನ್ಯ ಸಭಾಧ್ಯಕ್ಷರೇ, ರೈತರಿಗೆ ದ್ರೋಹ ಮಾಡಲಿಕ್ಕೆ ಇಂಗ್ಲೀಷ್‌ನಲ್ಲಿ ಈ ಪ್ರಸ್ತಾವನೆಯನ್ನು ಕೊಟ್ಟು ಒಂದು ರಹಸ್ಯ ಒಪ್ಪಂದಕ್ಕೆ ಇವರು ಕುತಂತ್ರ ನಡೆಸುತ್ತಿದ್ದಾರೆಂದು ಹೇಳಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಶ್ರೀಯುತ ವಾಟಾಳ್ ನಾಗರಾಜ್ ಮತ್ತು ಬಾಬಾಗೌಡ ರುದ್ರಗೌಡಪಾಟೀಲರು ಸಭಾತ್ಯಾಗ ಮಾಡಿದರು)

ಪ್ರೊ : ಎಂ. ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ಇದು ಕೇವಲ ಕನ್ನಡದಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ. ಇದು ಕೇವಲ ಡಂಕಲ್ ಪ್ರಸ್ತಾವನೆಯ ಕೃಷಿ ಭಾಗ ಮಾತ್ರ. ಕೇವಲ 70 ಪುಟಗಳು ಮಾತ್ರ ಇದೆ. ಹೋದ ತಿಂಗಳು ಅವರು ಹೇಳಿದ್ದು, ನಿಮ್ಮ ಪಕ್ಷದ ಸದಸ್ಯರಿಗೂ ಹೇಳಿದರು, ಈ ಸದನಕ್ಕೂ ಹೇಳಿದರು, ಕನ್ನಡದಲ್ಲಿ ಅಚ್ಚುಹಾಕಿಸುತ್ತೇವೆಂದು. ಕೃಷಿ ಮಂತ್ರಿಗಳು ನನಗೆ ಒಂದು ಪತ್ರವನ್ನು ಕೆಳಗಡೆ ಇಂಗ್ಲೀಷ್‌ನಲ್ಲಿ ರುಜುಮಾಡಿ ಕಳುಹಿಸಿರುತ್ತಾರೆ. ನಾನು ಕೃಷಿ ಮಂತ್ರಿಗಳಿಗೆ ಕೇಳುತ್ತಿದ್ದೇನೆ, ಇದನ್ನು ಓದಿದಾಗ ತಮಗೇನಾದರೂ ಅರ್ಥವಾಯಿತೇ ಎಂದು.ಇದು ದೇಶದ ಜನತೆಯ ಕಣ್ಣಿಗೆ ಮಣ್ಣೆರಚಿ, ನೀವು ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವವನ್ನು ಬೇರೆ ದೇಶಕ್ಕೆ ಬರೆದುಕೊಡುವುದಕ್ಕೆ ಹೊರಟಿದ್ದೀರಿ. ಏನು ಹುಡುಗಾಟಿಕೆ ಮಾಡುತ್ತಿದ್ದೀರಿ? ನೀವು ಡಂಕಲ್ ಪ್ರಸ್ತಾವನೆಯನ್ನು ಚರ್ಚೆ ಮಾಡಬೇಕೆಂದರೆ 460 ಪುಟಗಳದ್ದು ಅದು. ಡಂಕಲ್ ಪ್ರಸ್ತಾವನೆ ಎಂದರೆ, ಇದಲ್ಲ ಜೊತೆಗೆ ಇಂಗ್ಲೀಷ್‌ನಲ್ಲಿ ಕೊಟ್ಟಿರುವುದು ಮಹಾ ಮೋಸ, ಮಹಾ ಅಪರಾಧ. ಮತ್ತೆ ಬರೇ ಇದನ್ನೆ ಕೊಡುತ್ತಿದ್ದೀರಿ, ಕೃಷಿದ್ದು. ಇದರಿಂದ ಕೈಗಾರಿಕೆಗೆ ಏನು ಪರಿಣಾಮವಾಗುತ್ತದೆ ಎನ್ನುವುದು ಬೇಡವೇ? They are privatising insurance, banking and food marketing. ಹುಡುಗಾಟವಾಡುತ್ತಿದೆಯೇ ಸರ್ಕಾರ? ಮಾನ್ಯ ಸಭಾಧ್ಯಕ್ಷರೇ, ಇದನ್ನು ನಾನು ಮುಖ್ಯಮಂತ್ರಿಯವರ ಕಚೇರಿ ಎದುರಿಗೆ ಸುಡುವುದಕ್ಕೋಸ್ಕರ ಹೊರಗಡೆ ಹೋಗುತ್ತಿದ್ದೇನೆ.

(ಪ್ರೊ. ಎಂ.ಡಿ.ನಂಜುಂಡಸ್ವಾಮಿಯವರು ಸಭಾತ್ಯಾಗ ಮಾಡಿದರು)

ಶ್ರೀ ಅಜೀಜ್‌ಸೇಠ್ : ಮಾನ್ಯ ಅಧ್ಯಕ್ಷರೇ, ಕನ್ನಡದಲ್ಲಿ ಪ್ರತಿಗಳನ್ನು ಕೊಡಲಿಲ್ಲವೆಂದು with due regards to my friends, ನನ್ನ ಸ್ನೇಹಿತರು ಸಭಾತ್ಯಾಗ ಮಾಡಿದರು. Every time my friends say about Kannada. What is the Constitutional precedents. They give everything in two languages in the entire country-regional language and English. In Delhi, it is English-Hindi, in Tamilnadu, it is English-Tamil, in Maharastra it

is English-Marathi, in Andhrapradesh, it is English-Telugu. When we take a decision, it should be in consonance with the constitution. We cannot isolate ourselves from the whole of the country. ಇಡೀ ದೇಶದಲ್ಲಿ ಯಾವರೀತಿ ಇದೆ ಅದಕ್ಕೆ ಹಚ್ಚಿಕೊಂಡು ಹೋಗಬೇಕಾಗುತ್ತದೆ. ಅದಕ್ಕೆ ಐಸಲೋಟೆಡ್ ಆಗುವುದಕ್ಕೆ ಆಗುವುದಿಲ್ಲ. ಈ ರಾಜ್ಯದಲ್ಲಿ ಎಲ್ಲಾ ಭಾಷೆಗಳಲ್ಲಿ ಮಾತನಾಡುವವರು ಇದ್ದಾರೆ. ಇಂಗ್ಲೀಷ್, ತಮಿಳು, ತೆಲುಗು, ಮರಾಠಿ, ಉರ್ದು ಭಾಷೆಯನ್ನು ಮಾತನಾಡುವವರಿದ್ದಾರೆ. ಬೆಳಗಾಮ್ ಕಡೆ ಹೋದರೆ ಬರೇ ಮರಾಠಿ ಮಾತನಾಡುತ್ತಾರೆ. ಅನೇಕ ಸದಸ್ಯರಿಗೆ ಇಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲ; ಆದ್ದರಿಂದ, ಮಾತನಾಡುತ್ತಿಲ್ಲ. ತಾವು ಟ್ರಾನ್ಸ್‌ಲೇಷನ್ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಡಿ. ಎಲ್ಲಾ ಭಾಷೆಯನ್ನು ಟ್ರಾನ್ಸ್‌ಲೇಟ್ ಮಾಡಿಕೊಡಿ. ಇಂಗ್ಲೀಷ್, ತಮಿಳು, ಮರಾಠಿ, ಇತ್ಯಾದಿ ಯಾವ ಯಾವ ಸದಸ್ಯರು ಆ ಭಾಷೆಯವರು ಇದ್ದಾರೋ ಅವರು ಆ ಭಾಷೆಯಲ್ಲಿ ಮಾತನಾಡಲಿ ; ಅವರವರ ಭಾಷಣವನ್ನು ಟ್ರಾನ್ಸ್‌ಲೇಟ್ ಮಾಡಿಕೊಡಿ; ನಾವೆಲ್ಲರೂ ಕರ್ನಾಟಕದಲ್ಲಿ ಹುಟ್ಟಿದವರು; ಮತ್ತು ಬೆಳೆದಿರುವವರು, ಇವತ್ತು ಪದೇಪದೇ ಇದೇ ಮಾತು ಕೇಳಿಬರುತ್ತಿದೆ. ಉರ್ದು ಶಾಲೆಗಳಲ್ಲಿ ಟೀಚರ್ ಇಲ್ಲ, ಕನ್ನಡ ಕಂಪಲ್ಸರಿ ಮಾಡಿ ಅನ್ನುತ್ತಿದ್ದಾರೆ. ಕನ್ನಡದಲ್ಲಿ ಪಾಸ್ ಆಗುವವರೆಗೆ ಇಂಟರ್‌ವ್ಯೂಬರುವ ಹಾಗೆ ಇಲ್ಲ. ಕ್ಲಾಸ್ : 1-2ರಲ್ಲಿ ಎರಡು ವರ್ಷ ಕಲಿಸಿದ್ದಾರೆ. ಯಾವ ಕೆಲಸ ಮಾಡಿದರೂ ಬ್ಯಾಲೆನ್ಸಿಂಗ್ ಇರಬೇಕು. ಇತರೆ ಭಾಷೆಗಳನ್ನು 3 ಮತ್ತು 5ನೇ ತರಗತಿಯಿಂದ ಕಲಿಯಲು ಅವಕಾಶ ಮಾಡಿಕೊಡಬೇಕು. ಪದೇ ಪದೇ ಇದೇ ಮಾತುಗಳು ಬರುತ್ತಿವೆ. ಕನ್ನಡದ ಮಂತ್ರಿಗಳು ಕನ್ನಡವನ್ನು ಏಪ್ರಿಲ್ ಒಂದರಿಂದ ಅಫಿಷಿಯಲ್ ಲ್ಯಾಂಗ್ವೇಜ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇವತ್ತಿನ ದಿವಸ ಬೇರೆ ರಾಜ್ಯಗಳಿಂದ ಐಎಎಸ್. ಅಧಿಕಾರಿಗಳು ಬಂದಿದ್ದಾರೆ. ರಾಜಾಸ್ತಾನ, ಹರಿಯಾಣ, ಉತ್ತರಪ್ರದೇಶ, ಬಿಹಾರ, ಮಧ್ಯಪ್ರದೇಶಗಳಿಂದೆಲ್ಲಾ ಬಂದಿದ್ದಾರೆ. ಅವರಿಗೆಲ್ಲಾ ಒಂದು ತಿಂಗಳೊಳಗೆ ಈ ದೇಶದ ಭಾಷೆಯನ್ನು ಕಲಿಯಿರಿ ಎಂದರೆ ಕಷ್ಟವಾಗುತ್ತದೆ. Where are we going? Are we preparing ourselves to disintegrate the whole Country? Only one particular language is Hindi. It is the official language of the country. ಹಿಂದಿಯನ್ನು ಏತಕ್ಕೆ ಅಡಾಪ್ಟ್ ಮಾಡುವುದಿಲ್ಲ? ತೆಲುಗು ಮಾತನಾಡುವವರು ಇದ್ದಾರೆ, ತಮಿಳು ಮಾತನಾಡುವವರು ಇದ್ದಾರೆ, ಉರ್ದು ಮಾತನಾಡುವವರು ಇದ್ದಾರೆ, ಹೀಗೆ ಬೇಕಾದ ಭಾಷೆ ಮಾತನಾಡುತ್ತಾರೆ, ಅವರಿಗೆ ಆ ಹಕ್ಕು ಇದೆ. ಕನ್ನಡದ ಬಗ್ಗೆ ನ್ಯಾಯವಾಗಿ ವಿಚಾರ ಮಾಡಬೇಕು, ಬ್ಯಾಲೆನ್ಸಿಂಗ್ ಆಗಿ ಹೋಗಬೇಕು.

ವಿಷಯ : ಚುಕ್ಕೆ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯಲ್ಲಿ ಮಂಡಿಸುವ ಬಗ್ಗೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 23ನೇ ಮಾರ್ಚ್ 1993ರಂದು ಸದನದಲ್ಲಿ ಪ್ರಶ್ನೋತ್ತರ ವೇಳೆಯು ನಡೆಯದಿದ್ದ ಪ್ರಯುಕ್ತ ಹಾಗೂ ದಿನಾಂಕ 26ನೇ

ಮಾರ್ಚ್ 1993ರಂದು ಸದನದ ಕಾರ್ಯಕಲಾಪಗಳು ರದ್ದಾದ ಪ್ರಯುಕ್ತ 23ನೇ ಮಾರ್ಚ್ 1993ರ ಚುಕ್ಕೆ ಗುರುತಿನ 25ನೇ ಪಟ್ಟಿಯಲ್ಲಿನ 20 ಪ್ರಶ್ನೆಗಳ ಪೈಕಿ 18 ಪ್ರಶ್ನೆಗಳಿಗೆ ಸಂಬಂಧಿಸಿದ ಉತ್ತರಗಳನ್ನು ಮತ್ತು ಚುಕ್ಕೆ ಗುರುತಿಲ್ಲದ 25ನೇ ಪಟ್ಟಿಯಲ್ಲಿನ 62 ಪ್ರಶ್ನೆಗಳ ಪೈಕಿ 55 ಪ್ರಶ್ನೆಗಳಿಗೆ ಸಂಬಂಧಿಸಿದ ಉತ್ತರಗಳನ್ನು ಹಾಗೂ 26ನೇ ಮಾರ್ಚ್ 1993ರ ಚುಕ್ಕೆ ಗುರುತಿನ 26ನೇ ಪಟ್ಟಿಯಲ್ಲಿನ 20 ಪ್ರಶ್ನೆಗಳಿಗೆ ಸಂಬಂಧಿಸಿದ ಉತ್ತರಗಳನ್ನು ಮತ್ತು ಚುಕ್ಕೆ ಗುರುತಿಲ್ಲದ 26ನೇ ಪಟ್ಟಿಯಲ್ಲಿನ 38 ಪ್ರಶ್ನೆಗಳ ಪೈಕಿ 29 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ : ಬೆಂಗಳೂರಿನಲ್ಲಿರುವ ವೀಡಿಯೋ ಗೇಮ್ಸ್‌ಗಳ ಬಗ್ಗೆ ಕುರಿತು.

Q : 1850

ಶ್ರೀ ಆರ್. ದಯಾನಂದರಾವ್ (ಗಾಂಧಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ವಿಡಿಯೋ ಗೇಮ್ಸ್ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಈ ವೀಡಿಯೋ ಗೇಮ್ಸ್‌ಗಳಿಂದಾಗಿ ಸಾಕಷ್ಟು ಸಂಸಾರಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬೆಂಗಳೂರು ನಗರದಲ್ಲಿ ವೀಡಿಯೋ ಗೇಮ್ಸ್‌ಗಳನ್ನು ನಿಷೇಧಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) :

ಅ) ಈಗ ಸಧ್ಯಕ್ಕೆ ಬೆಂಗಳೂರು ನಗರದಲ್ಲಿ ಯಾವುದೇ ವೀಡಿಯೋ ಗೇಮ್ಸ್ ಕೇಂದ್ರಗಳು ನಡೆಯುತ್ತಿರುವುದಿಲ್ಲ. ಬೆಂಗಳೂರು ನಗರ ಪೋಲೀಸ್ ಕಮಿಷನ್‌ರವರು 1991 ಮತ್ತು 1992ರಲ್ಲಿ ಒಟ್ಟು 44 ವೀಡಿಯೋ ಗೇಮ್ಸ್ ಪರವಾನಿಗೆಗಳನ್ನು ಮಾತ್ರ ನೀಡಿದ್ದು ಅವುಗಳನ್ನು ದಿನಾಂಕ 31-1-1993ರವರೆಗೆ ನವೀಕರಿಸಲಾಗಿತ್ತು.

ಆ) ಇಲ್ಲ. ಆದರೆ ಇದರ ಬಗ್ಗೆ ಸಾಕಷ್ಟು ದೂರುಗಳು ಬಂದಿವೆ.

ಇ) ಸರ್ಕಾರವು ತಕ್ಷಣದಿಂದಲೇ ಜಾರಿಗೆ ಬರುವಂತೆ ಬೆಂಗಳೂರು ನಗರವೂ ಸೇರಿದಂತೆ ರಾಜ್ಯಾದ್ಯಂತ ಈ ವೀಡಿಯೋ ಗೇಮ್ಸ್‌ಗಳನ್ನು ನಡೆಸಲು ಹೊಸ ಪರವಾನಿಗೆಗಳನ್ನು ನೀಡಬಾರದೆಂದೂ ಮತ್ತು ಹಳೆಯ ಪರವಾನಿಗೆಗಳನ್ನು ನವೀಕರಿಸಬಾರದೆಂದು ಈಗಾಗಲೇ ಎಲ್ಲಾ ಪೋಲೀಸ್ ಕಮಿಷನರ್‌ಗಳಿಗೆ ಮತ್ತು ಎಲ್ಲಾ ಜಿಲ್ಲಾಧಿಕಾರಿಗಳಿಗೆ ದಿನಾಂಕ 12-3-1993ರಂದೇ ಸೂಚನೆಗಳನ್ನು ನೀಡಿದೆ.

ವಿಷಯ : ಹಾಸನ ಜಿಲ್ಲಾ ಪ್ರವಾಸೋದ್ಯಮ ಸಮಗ್ರ ಅಭಿವೃದ್ಧಿ ಕುರಿತು:

Q : 1187

ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?